# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 610 |
| ಮಾನ್ಯ ಸದಸ್ಯರ ಹೆಸರು | ಶ್ರೀ ಅರವಿಂದ ಕುಮಾರ್ ಅರಳಿ (ವಿಧಾನ ಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | 17.12.2021 |
| ಉತ್ತರಿಸುವ ಸಚಿವರು | ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಸಚಿವರು |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಬೀದರ್ ಜಿಲ್ಲೆಯಲ್ಲಿ 2021-22ನೇ ಸಾಲಿನ ವಸತಿ ನಿಲಯಗಳಿಗೆ ಆಹಾರ ಸಾಮಗ್ರಿ ಸರಬರಾಜು ಮಾಡಲು ಟೆಂಡರ್ ಕರೆದಿದ್ದು, ಈ ಟೆಂಡರ್ ನಲ್ಲಿ ಅವ್ಯವಹಾರವಾಗಿದ್ದು, ಸರ್ಕಾರದ ಗಮನಕ್ಕೆ ಬಂದಿದೆಯೇ; | ಶ್ರೀ ಅರವಿಂದ ಕುಮಾರ ಅರಳಿ, ಶಾಸಕರು ವಿಧಾನ ಪರಿಷತ್ ಇವರು ಮಾನ್ಯ ಸಚಿವರಿಗೆ ನೀಡಿರುವ ದೂರಿನ ಹಿನ್ನಲೆಯಲ್ಲಿ, ಮಾನ್ಯ ಸಮಾಜ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಸಚಿವರಿಂದ ದಿನಾಂಕ:26.10.2021 ರಂದು ಬೀದರ್ ಜಿಲ್ಲೆಯಲ್ಲಿ ಇಲಾಖೆಯ ವಸತಿ ನಿಲಯಗಳಿಗೆ ಆಹಾರ ಸಾಮಾಗ್ರಿ ಸರಬರಾಜು ಮಾಡುವ ಟೆಂಡರ್ ಪ್ರಕ್ರಿಯೆಯಲ್ಲಿ ಅವ್ಯವಹಾರ ಜರೂಗಿರುವ ಬಗ್ಗೆ ಟಿಪ್ಪಣಿ ಸ್ವೀಕೃತವಾಗಿರುತ್ತದೆ. ಈ ಬಗ್ಗೆ ಪರಿಶೀಲಿಸಿ ಕೂಡಲೇ ವರದಿ ಸಲ್ಲಿಸುವಂತೆ ಆಯುಕ್ತರು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಇವರಿಗೆ ದಿನಾಂಕ:04.11.2021 ರಂದು ಪತ್ರ ಹಾಗೂ ದಿನಾಂಕ:19.11.2021 ರಂದು ನೆನಪೋಲೆಯನ್ನು ಮತ್ತು ದಿನಾಂಕ:23.11.2021 ರಂದು ಸರ್ಕಾರದ ಪ್ರಧಾನ ಕಾರ್ಯದರ್ಶಿಯವರಿಂದ ಅ.ಸ.ಪತ್ರವನ್ನು ಹೊರಡಿಸಲಾಗಿರುತ್ತದೆ. ಆಯುಕ್ತರು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಇವರಿಂದ ದಿನಾಂಕ:08.12.2021 ರಂದು ಸರ್ಕಾರಕ್ಕೆ ವರದಿ ತಲುಪಿರುತ್ತದೆ. |
| ಆ) | ಈ ಟೆಂಡರ್ ನಲ್ಲಿ ಎಲ್-2 ಮತ್ತು ಎಲ್-3 ಬಿಟ್ಟು ನೇರವಾಗಿ ಎಲ್-5 ಮತ್ತು ಎಲ್-6 ರವರಿಗೆ ಆಹಾರ ಸಾಮಗ್ರಿ ಸರಬರಾಜು ಮಾಡಲು ಆದೇಶ ನೀಡಲು ಅವಕಾಶವಿದೆಯೇ; | ಆಯುಕ್ತರು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಇವರಿಂದ ದಿನಾಂಕ:08.12.2021 ರಂದು ಸರ್ಕಾರಕ್ಕೆ ವರದಿ ತಲುಪಿರುತ್ತದೆ. ಸದರಿ ವರದಿಯನ್ನು ನಿಯಮಾನುಸಾರ ಪರಿಶೀಲಿಸಿ, ನಿಯಮಗಳಂತೆ ಅಗತ್ಯ ಕ್ರಮ ಕೂಡಲೇ ಕೈಗೊಳ್ಳಲಾಗುವುದು. |

| | | |
|---|---|---|
| ಇ) | ಅವಕಾಶವಿದ್ದಲ್ಲಿ, ಯಾವ ನಿಯಮದಡಿ ನೀಡಲಾಗಿದೆ. ಈ ಕ್ರಮದಿಂದ ಸರ್ಕಾರಕ್ಕೆ ಪ್ರತಿ ತಿಂಗಳಿಗೆ ಲಕ್ಷಾಂತರ ರೂಪಾಯಿ ನಷ್ಟವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಇದು ಕೆ.ಟಿ.ಟಿ.ಪಿ ಕಾಯ್ದೆ ಉಲ್ಲಂಘಿಸಿದಂತಾಗುವುದಿಲ್ಲವೇ; | ಆಯುಕ್ತರು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಇವರಿಂದ ದಿನಾಂಕ:08.12.2021 ರಂದು ಸರ್ಕಾರಕ್ಕೆ ವರದಿ ತಲುಪಿರುತ್ತದೆ. ಸದರಿ ವರದಿಯನ್ನು ನಿಯಮಾನುಸಾರ ಪರಿಶೀಲಿಸಿ, ನಿಯಮಗಳಂತೆ ಅಗತ್ಯ ಕ್ರಮ ಕೂಡಲೇ ಕೈಗೊಳ್ಳಲಾಗುವುದು. |
| ಈ) | ಈ ಟೆಂಡರ್ ನಲ್ಲಿ 5 ತಾಲ್ಲೂಕುಗಳಿಗೆ ಈಗಾಗಲೇ ಆದೇಶ ನೀಡಿರುವುದು ನಿಜವೇ; (ಆ ಟೆಂಡರ್ ದಾರರ ಟೆಂಡರ್ ದಾಖಲಾತಿಗಳ ಜೊತೆಯಲ್ಲಿ ಎಲ್-1 ರಿಂದ ಎಲ್-6 ವರೆಗೆ ಟೆಂಡರ್ ದಾರರ ಮಾಹಿತಿ ನೀಡುವುದು) | ಆಯುಕ್ತರು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಇವರಿಂದ ದಿನಾಂಕ:08.12.2021 ರಂದು ಸರ್ಕಾರಕ್ಕೆ ವರದಿ ತಲುಪಿರುತ್ತದೆ. ಸದರಿ ವರದಿಯನ್ನು ನಿಯಮಾನುಸಾರ ಪರಿಶೀಲಿಸಿ, ನಿಯಮಗಳಂತೆ ಅಗತ್ಯ ಕ್ರಮ ಕೂಡಲೇ ಕೈಗೊಳ್ಳಲಾಗುವುದು. |

**ಸಂಖ್ಯೆ: ಹಿಂವಕ 747 ಬಿಎಂಎಸ್ 2021**

(ಕೋಟ ಶ್ರೀನಿವಾಸ ಪೂಜಾರಿ)
ಸಮಾಜ ಕಲ್ಯಾಣ ಹಾಗೂ ಹಿಂದುಳಿದ
ವರ್ಗಗಳ ಕಲ್ಯಾಣ ಸಚಿವರು